ಸಿ.ಸಿ. ನಂ. **13412/2019**

**ಫ್ರಾ.ಸಃ 1 ಚಾ.ಸಃ 1**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕಃ **20.12.2021** ರಂದು ಪುನಃ ಕರೆಯಿಸಿ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್.ಎಸ್ ಆರೋಪಿ ಪರ ವಕೀಲರಿಂದಃ

ಆರೋಪಿತರ ವಿರುದ್ಧ ನಾನು ಮೂರು ಪ್ರಕರಣಗಳನುನ ದಾಖಲು_ಮಾಡಿದ್ದೇನೆ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ನಾನು ದೂರು ನೀಡಿದಾಗ 10 ಗಂಟೆಯಾಗಿತ್ತು. ನಾನು ಮೊದಲು ನೇರವಾಗಿ ಪೊಲೀಸ್ ಠಾಣಾಗೆ ಹೋಗಿದ್ದು, ಆಗ ಪೊಲೀಸರು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬನ್ನಿ ಎಂದು ಹೇಳಿರುತ್ತಾರೆ. ಸದರಿ ವಿಚಾರವನ್ನು ದೂರಿನಲ್ಲಿ ತಿಳಿಸಿಲ್ಲ. ಗಲಾಟೆ ಎಲ್ಲಿ ಆಯಿತು ಎಂಬ ಬಗ್ಗೆ ನಾನು ದುಾರಿನಲ್ಲಿ ತಿಳಿಸಿದ್ದೇನೆ. ನನ್ನ ಮುಖ್ಯ ವಿಚಾರಣದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಗಲಾಟೆಗೂ ಮುಂಚೆ ನಾನು ವಸಂತ ರವರ ಜೊತೆ ಮಾತನಾಡುತ್ತಿದ್ದೆ. ಸದರಿ ವಿಚಾರವನ್ನು ನಾನು ದೂರಿನಲ್ಲಿ ತಿಳಿಸಿರುತ್ತೇನೆ. ನಿಪಿ.3 ರಿಂದ 6 ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.4 ನನ್ನ ಸ್ನೇಹಿತ ಎಂದರೆ ಸರಿ, ಆತ ನನ್ನ ಮಗನ ಅಂಗಡಿ ಗಿರಾಕಿ ಇರುತ್ತಾನೆ. ಚಾಸಾ.2 ರವರು ನನ್ನ ಮೈದುನನ ಮನೆಯ ಬಾಡಿಗೆದಾರ. ಆರೋೀಪಿತರಿಗೆ ತೊಂದರೆ ನೀಡಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

37 ನೇ ಅ.ಮು. ಮ. ದಂ. ನ್ಯಾ